**CC 3085/2023**

**PW-01**

**ಸಾಕ್ಷಿಗೆ ದಿನಾಂಕ: 05.11.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರ ಶ್ರೀ RBD ರವರಿಂದಃ**

ಆರೋಪಿತನಿಗೆ ನಾನು ಹಣ ಕೊಟ್ಟ ಬಗ್ಗೆ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆರೋಪಿತನು ವೈಧ್ಯಾಧಿಕಾರಿಯಾಗಿದ್ದು, ಸದರಿಯವರು ಸ್ವಂತ ಆಸ್ಪತ್ರೆ ತೆಗೆಯುತ್ತೇನೆ ಎಂದು ಹೇಳಿದ ಕಾರಣ ಹಣವನ್ನು ಕೊಟ್ಟಿರುತ್ತೇನೆ. ಆರೋಪಿತನಿಗೆ ಹಣವನ್ನು ಬ್ಯಾಂಕ ಮುಖಾಂತರ ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿತನು ನಾನು ಸರ್ಕಾರಿ ವೈದ್ಯನಾಗಿರುವುದರಿಂದ ನನಗೆ ಆದಾಯ ತೇರಿಗೆ ಸಮಸ್ಯೆ ಆಗುತ್ತದೆ ಎಂಬ ಕಾರಣದಿಂದ ನಗದು ರೂಪದಲ್ಲಿ ನನ್ನಿಂದ ಹಣವನ್ನು ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಾನು ಆರೋಪಿತನಿಗೆ ಕೊಟ್ಟ ಹಣವನ್ನು ಮರಳಿ ಕೊಡುವಂತೆ ಆಗ್ಗಾಗ್ಗೆ ಕೇಳಿರುತ್ತೇನೆ. ಹೀಗೆ ಆರೋಪಿತನಿಗೆ ಮರಳಿ ಹಣವನ್ನು ಕೊಡುವಂತೆ ಫೋನ್ ಮುಖಾಂತರ, ಆರೋಪಿತನು ನಮ್ಮ ಮನೆಗೆ ಬಂದ ಸಮಯದಲ್ಲಿ ಹಾಗೂ ಅವರ ಆಸ್ಪತ್ರೆಗೆ ಹೋದ ಸಮಯದಲ್ಲಿ ಕೇಳಿರುತ್ತೇನೆ.

ಆರೋಪಿತನ ಆಸ್ಪತ್ರೆಯ ಸಿಬ್ಬಂದಿಯಾದ ಸೀಮಾ ಹಾಗೂ ನನಗೆ ಯಾವ ಕಾರಣಕ್ಕೆ ಜಗಳ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸೀಮಾ ಇವರು ನಾನು ಆಸ್ಪತ್ರೆಗೆ ಕಳ್ಳತನ ಮಾಡಲು ಬಂದಿರುತ್ತೇನೆ ಎಂದು ಸುಳ್ಳು ದೂರನ್ನು ನೀಡಿದ್ದರು ಆದ್ದರಿಂದ ನಾನು ಆರೋಪಿತನ ನನಗೆ ಹಣವನ್ನು ಕೊಡುವುದಿರುವ ಕಾರಣ ನಾನು

ಆಸ್ಪತ್ರೆಗೆ ಬಂದಿರುತ್ತೇನೆ ಆದರೆ ಕಳ್ಳತನ ಮಾಡಲು ಬಂದಿರುವುದಿಲ್ಲ ಎಂದು ಹೇಳಿ ಆರೋಪಿತನ ವಿರುದ್ದ ನಾನು ದೂರನ್ನು ದಾಖಲು ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ದೂರನ್ನು ದಾಖಲು ಮಾಡಿದ ನಿಖರವಾದ ದಿನಾಂಕ ಹಾಗೂ ಇಸ್ವಿ ನನಗೆ ಗೊತ್ತಿಲ್ಲ ಆದರೆ ಆಗಸ್ಟ ತಿಂಗಳಲ್ಲಿ ದಾಖಲು ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಆರೋಪಿತನಿಗೆ ಒಟ್ಟು ರೂ.10,26,100/- ಗಳನ್ನು ಕೊಟ್ಟಿರುತ್ತೇನೆ. ನಾನು ನನ್ನ ಪಿರ್ಯಾದಿಯಲ್ಲಿ ಬರೆಯಿಸಿದ ಹಾಗೆ ರೂ.1,76,100/- ಗಳ ವ್ಯವಹಾರ ಯಾವುದು ಎಂದರೆ ಸಾಕ್ಷಿಯು ಸದರಿ ವ್ಯವಹಾರವನ್ನು ಆರೋಪಿತನು ನನ್ನ ಹೆಸರಿನ ಕ್ರೇಡಿಟ ಕಾರ್ಡ ಹಾಗೂ ಇಎಂಐ ಮುಖಾಂತರ ಮೊಬೈಲ ಖರೀದಿ ಮಾಡಿದ ಕುರಿತು ಇರುವ ವ್ಯವಹಾರ ಇರುತ್ತದೆ ಎಂದು ಹೇಳುತ್ತಾರೆ. ನಾನು ಆರೋಪಿತನನ್ನು ದಿಃ 26.02.2023 ರಂದು ಕೊನೆಯದಾಗಿ ಬೇಟಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ದಿನಾಂಕದಂದು ಆರೋಪಿತನೇ ನಮ್ಮ ಮನೆಗೆ ಬಂದಿದ್ದನು ಎಂದು ಹೇಳುತ್ತಾರೆ. ಸದರಿ ದಿನಾಂಕದಂದು ಈ ಪ್ರಕರಣದ ಮುದ್ದತ್ತು ಇದ್ದುದರಿಂದ ಅದೇ ದಿನ ಆರೋಪಿತನು ನಮ್ಮ ಮನೆಗೆ ಬಂದು ಪ್ರಸ್ತುತ ಪ್ರಕರಣವನ್ನು ಮರಳಿ ಪಡೆಯುವಂತೆ ನನಗೆ ಹೇಳಲು ಬಂದಿದ್ದರು.

ನನ್ನ ಪಿರ್ಯಾದಿಯಲ್ಲಿ ಆರೋಪಿತನು ದಿಃ 22.07.2023 ರಂದು ರೂ.26,100/- ಗಳನ್ನು ನನಗೆ ಮರಳಿ ಕೊಟ್ಟಿರುತ್ತಾರೆ ಎಂದು ಬರೆದಿರುತ್ತೇನೆ ಎಂದರೆ ನಿಜ. ಸದರಿ ಹಣವನ್ನು ಆರೋಪಿತನ ನನಗೆ ನಗದು ರೂಪದಲ್ಲಿ ಆರೋಪಿತನ ಆಸ್ಪತ್ರೆಗೆ ನಾನು ಮತ್ತೇ ನಮ್ಮ ಅಣ್ಣ ಹೋದಾಗ ಸದರಿ ಹಣವನ್ನು ಕೊಟ್ಟು ಅದರ ಜೊತೆಗೆ ಚೆಕ್ ನ್ನು ಕೊಟ್ಟಿರುತ್ತಾರೆ. ಹೀಗೆ ಹಣ ಕೊಟ್ಟ ದಿನಾಂಕ

ನನಗೆ ಈಗ ನೆನಪಿಲ್ಲ ಆದರೆ ಆರೋಪಿತನು ಚೆಕ ಕೊಟ್ಟ ಒಂದು ತಿಂಗಳ ನಂತರ ನಾನು ಸದರಿ ಚೆಕ್ ನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿರುತ್ತೇನೆ. ಆರೋಪಿತನಿಗೆ ನಾನು ಕೊಟ್ಟ ಹಣವನ್ನು ಮರಳಿ ಕೇಳಿದಾಗ ನನಗೆ ಸದರಿ ಚೆಕ್ ನ್ನು ಕೊಟ್ಟಿರುತ್ತಾನೆ. ಹೀಗೆ ಆರೋಪಿತನ ಕೊಟ್ಟ ಚೆಕ್ ನ್ನು ನಾನು ಕಿತ್ತೂರಿನ ಎಸ್ ಬಿ ಐ ಬಾ್ಯಂಕಗೆ ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ ಆದರೆ ನಗದೀಕರಣಕ್ಕಾಗಿ ಕೊಟ್ಟ ನಿಖರವಾದ ದಿನಾಂಕ ನನಗೆ ಈಗ ನೆನಪಿಲ್ಲ. ಸದರಿ ಚೆಕ್ ನ್ನು ನಗದೀಕರಣಕ್ಕಾಗಿ ನಾನೇ ಸಲ್ಲಿಸಿರುತ್ತೇನೆ. ಹೀಗೆ ಚೆಕ್ ನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿದ ನಂತರ ಬ್ಯಾಂಕನವರು ನನಗೆ ಡೆಪಾಜೀಟ್ ಸ್ಲೀಪ್ ಕೊಟ್ಟಿರುತ್ತಾರೆ. ಸದರಿ ಡೆಪಾಜೀಟ್ ಸ್ಲೀಪ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸದರಿ ಚೆಕ್ ನ್ನು ನಾನು ಬ್ಯಾಂಕ್‌ನಲ್ಲಿ ಸಂಬಂಧಪಟ್ಟ ಸಿಬ್ಬಂದಿಯ ಹತ್ತಿರ ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ.

ನಾನು ಸಲ್ಲಿಸಿದ ನಗದೀಕರಣಕ್ಕಾಗಿ ಕೊಟ್ಟ ಚೆಕ್ ನ್ನು ಅದೇ ದಿನ ಸಂಬಂಧಪಟ್ಟ ಸಿಬ್ಬಂದಿಯು ಸದರಿ ಚೆಕ್ ನಲ್ಲಿರು ವ ಸಹಿ ವ್ಯತ್ಯಾಸ ಇರುತ್ತದೆ ಎಂದು ಹೇಳಿ ಮರಳಿ ಹಿಂಬರಹ ಕೊಟ್ಟಿರುತ್ತಾರೆ. ಸದರಿ ಚೆಕ್ ಜೊತೆ ಒಂದು ಲಿಖಿತ ದಾಖಲೆಯನ್ನು ನನಗೆ ಕೊಟ್ಟಿರುತ್ತಾರೆ. ಸಾಮಾನ್ಯವಾಗಿ ಬ್ಯಾಂಕನವರು ಲಿಖಿತ ದಾಖಲೆ ಕೊಡಬೇಕಾದರ ಅದಕ್ಕೆ ಬ್ಯಾಂಕ್ ಸೀಲ್ ಹಾಕಿ ಕೊಡುತ್ತಾರೆ ಹಾಗೂ ಸದರಿ ಸೀಲನಲ್ಲಿ ದಿನಾಂಕ, ತಿಂಗಳು ಮತ್ತು ವರ್ಷ ನಮೂದು ಇರುತ್ತದೆ ಎಂದರೆ ನಿಜ. ಸದರಿ ಬ್ಯಾಂಕನವರು ಕೊಟ್ಟ ಮೆಮೊದಲ್ಲಿ ದಿನಾಂಕವನ್ನು ನಾನೇ ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಹೀಗೆ ಸದರಿ ಚೆಕ್‌ನಲ್ಲಿ ಆರೋಪಿತನ ಸಹಿ ವ್ಯತ್ಯಾಸ ಇರುತ್ತದೆ ಹಾಗೂ ನಿಮ್ಮ ಖಾತೆಯಲ್ಲಿ ಅಷ್ಟು ಹಣ ಇರುವುದಿಲ್ಲ ಎಂದು ಅದೇ ದಿನ ನಾನು ಆರೋಪಿತನಿಗೆ ಕೇಳಿರುತ್ತೇನೆ. ಹೀಗೆ ಚೆಕ್ ಬೌನ್ಸ ಆದ

ಕುರಿತು ನಮ್ಮ ವಕೀಲರು ಆರೋಪಿತನಿಗೆ ನೋಟೀಸ ಕಳುಹಿಸಿರುತ್ತಾರೆ. ಸದರಿ ನೋಟೀಸನ್ನು ಆರೋಪಿತನ ಆಸ್ಪತ್ರೆಯ ವಿಳಾಸಕ್ಕೆ ಕಳುಹಿಸಿರುತ್ತೇನೆ. ನಿಪಿ 1 ರಂತೆ ಇರುವ ಚೆಕ್ ನ್ನೆ ಆರೋಪಿತನು ನನಗೆ ಕೊಟ್ಟಿರುತ್ತಾನೆ.

ಆರೋಪಿತನು ನಿಪಿ 1 ರಂತೆ ಇರುವ ಚೆಕ್ ನಂಬರ 485119 ನೇದ್ದು ಕಿತ್ತೂರಿನ ಬ್ಯಾಂಕನಲ್ಲಿ ನಗದೀಕರಣಕ್ಕಾಗಿ ಸಲ್ಲಿಕೆ ಆಗಿರುತ್ತದೆಯೇ ಎಂದು RTI ಮುಖಾಂತರ ಬೆಂಗಳೂರಿನ ಎಸ್ ಬಿ ಐ ಬ್ಯಾಂಕಿಗೆ ಕೇಳಿದಾಗ ಅವರ ಕಿತ್ತೂರಿನ ಬ್ಯಾಂಕಿನಲ್ಲಿ ಸದರಿ ಚೆಕ್ ನಂಬರ ಇರುವ ಚೆಕ್ ನಗದೀಕರಣಕ್ಕಾಗಿ ಸಲ್ಲಿಕೆ ಆಗಿರುವುದಿಲ್ಲ ಎಂದು ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿತನಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಹಾಗೂ ಆರೋಪಿತನು ನನಗೆ ನಿಪಿ 1 ರಂತೆ ಇರುವ ಚಕ್ ನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹೀಗೆ ಆರೋಪಿತನು ನನಗೆ ಯಾವುದೇ ಹಣವನ್ನು ಕೊಡದೇ ಇದ್ದರೂ ಸಹ ಆರೋಪಿತನ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಅದಕ್ಕೆ ಪೂರಕವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**